1	2	3
	2000-2001	
1.	Mohiyuddin Jumma Masjid, Kodi.	20000.00
2.	Rahmaniya Jumma Masjid, Hemmady.	20000.00
	2001-2002	
1.	Mohiyuddin Jumma Masjid, Kodi,	25000.00
2.	Mohamadiya Jumma Masjid, Karimanjeshwara.	25000.00
3.	Mihraj Jumma Masjid, Gulwady.	25000.00
4.	Rahmaniya Jumma Masjid, Hemmady.	25000.00
	Total :	**185000.00**
	Grand Total :	**925000.00**

ಎನ್.ಜಿ.ಇ.ಎಫ್ ಕಾರ್ಖಾನೆಯ ಆಸ್ತಿ ವಿವರ

1311(1729) ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎನ್‌ಜಿಎಫ್ ಕಾರ್ಖಾನೆಯ ವ್ಯಾಪ್ತಿಗೊಳಪಟ್ಟ ಆಸ್ತಿಪಾಸ್ತಿಗಳ ಒಟ್ಟು ಮೌಲ್ಯ ಎಷ್ಟು; ಕಾರ್ಖಾನೆ ಇರುವ ಒಟ್ಟು ಜಮೀನಿನ ವಿಸ್ತೀರ್ಣ ಎಷ್ಟು; ಕಾರ್ಖಾನೆಯ ವಾಸದ ಮನೆ: ನಿವೇಶನಗಳನ್ನು ಮಾರಾಟ ಮಾಡಿದ್ದರಿಂದ ಬಂದ ಒಟ್ಟು ಹಣ ಎಷ್ಟು?

ಆ) ಸ್ವಯಂನಿವೃತ್ತಿಯಾದ ಕಾರ್ಮಿಕರಿಗೆ ಪರಿಹಾರವನ್ನು ನೀಡಲಾಗಿದೆಯೇ? ಪರಿಹಾರ ಮೊತ್ತದಲ್ಲಿ ಕಾರ್ಖಾನೆಯ ಮತ್ತು ಸರ್ಕಾರದ ಹಣದ ಪಾಲು ಎಷ್ಟು ಪರಿಹಾರ ನೀಡುವಲ್ಲಿ ಆದ ಒಪ್ಪಂದದ ವಿವರಗಳೇನು?ಒಪ್ಪಂದದಲ್ಲಿ ಉಲ್ಲಂಘನೆಯಾದ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ; ಬಂದಿದ್ದಲ್ಲಿ ಅದಕ್ಕೆ ಯಾರು ಕಾರಣರು, ಅಂಥವರ ಮೇಲೆ ಸರ್ಕಾರದವರು ಜರುಗಿಸಿದ ಕ್ರಮಗಳೇನು?

ಇ) ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ಎನ್‌ಜಿಇಎಫ್ ಕಾರ್ಖಾನೆಯು ಜಮೀನನ್ನು ನೀಡಿದೆಯೇ, ನೀಡಿದ್ದಲ್ಲಿ ಅದರ ವಿವರಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಮೆ:ಟಾಟಾ ಎಕನಾಮಿಕ್ ಕನ್‌ಸಲ್ಟೆನ್ಸಿ ಸರ್ವೀಸಸ್ (ಮೌಲ್ಯಮಾಪಕರು) ರ ಅನುಸಾರ ಎನ್‌ಜಿಇಎಫ್ ಕಾರ್ಖಾನೆಯು ನೀಡಿರುವ ಮಾಹಿತಿಯಂತೆ ಸದರಿ ಕಂಪನಿಯ ವ್ಯಾಪ್ತಿಗೊಳಪಟ್ಟ ಆಸ್ತಿಪಾಸ್ತಿಗಳ ಒಟ್ಟು ಮೌಲ್ಯ ರೂ. 353.72 ಕೋಟಿಗಳು. ಕಾರ್ಖಾನೆಯ ಒಟ್ಟು ಜಮೀನಿನ ವಿಸ್ತೀರ್ಣ 173 ಎಕರೆಗಳು. ಕಾರ್ಖಾನೆಯ ವಸತಿಗೃಹಗಳ ಮಾರಾಟದಿಂದ ಬಂದ ನಗದು ಹಣ ರೂ. 25.84ಕೋಟಿಗಳು. ಜಮೀನು: ಕಟ್ಟಡಗಳ ಮಾರಾಟ ಮಾಡಿದ್ದರಿಂದ ಬಂದ ಒಟ್ಟು ಹಣ ರೂ. 99.69ಕೋಟಿಗಳು.

ಆ) ಕಂಪನಿಯು ದಿ: 31.3.2002ರವರೆಗೂ ಸ್ವಯಂ ನಿವೃತ್ತಿ ಯೋಜನೆಯ ಪರಿಹಾರವನ್ನು ನೀಡಿದೆ. ಕಂಪನಿಯು ಮುಚ್ಚುವ ಸ್ಥಿತಿ ಇರುವುದರಿಂದ ಈ ಪರಿಹಾರವನ್ನು ಕ್ರಮಬದ್ಧವಾಗಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಆದಾಗ್ಯೂ, ಕಂಪನಿಯ ಸ್ಥಿರಾಸ್ತಿಗಳು ಮಾರಾಟವಾದ ನಂತರ ಈ ಮೊತ್ತವನ್ನು ಪ್ರಸ್ತುತ ನಿವ್ವಳ ಮೌಲ್ಯದ ಆಧಾರದ ಮೇಲೆ ಏಕೈಕ ತೀರುವಳಿಯಾಗಿ ಇತ್ಯರ್ಥ

ಮಾಡಲಾಗುವುದು. ಸ್ವಯಂ ನಿವೃತ್ತಿ ಯೋಜನೆಯ ಒಪ್ಪಂದದಲ್ಲಿ ಉಲ್ಲಂಘನೆಯಾದ ಬಗ್ಗೆ ಯಾವುದೇ ದೂರುಗಳು ಸರ್ಕಾರಕ್ಕೆ ಬಂದಿಲ್ಲ.

ಇ) ಎನ್‌ಜಿಎಫ್ ನಿಯಮಿತ 29.063 ಎಕರೆ ಜಮೀನನ್ನು ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಆಫ್ ಇಂಡಿಯಾದ ಒಟ್ಟು ರೂ. 63,29,94,630.00ಗೆ ಮಾರಾಟ ಮಾಡಿ, ಜನವರಿ 20:1ರಲ್ಲಿ ಎನ್‌ಪಿಸಿಐಎಲ್ ತನ್ನ ಪರವಾಗಿ ಸ್ವತ್ತನ್ನು ನೋಂದಾಯಿಸಿಕೊಂಡಿತು.

ಚಿಂಚೋಳಿ ತಾಲ್ಲೂಕಿನಲ್ಲಿ ವಸತಿ ನಿಲಯದ ಮೇಲ್ವಿಚಾರಕರು ಮತ್ತು ಆಶ್ರಮ ಶಾಲೆಯ ಶಿಕ್ಷಕರು

1312(1607) ಶ್ರೀ ಕೈಲಾಸನಾಥ್ ಪಾಟೀಲ್, (ಚಿಂಚೋಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಂಚೋಳಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ವಸತಿ ನಿಲಯಗಳಲ್ಲಿ ಹಾಗೂ ಆಶ್ರಮ ಶಾಲೆಗಳಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಒಟ್ಟು ಶಿಕ್ಷಕರ ಹಾಗೂ ವಸತಿ ನಿಲಯದ ಅಧೀಕ್ಷಕರ ಸಂಖ್ಯೆ ಎಷ್ಟು?

ಆ) ಖಾಲಿ ಇದ್ದಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಎ, ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ವಿದ್ಯಾರ್ಥಿನಿಲಯ ಮೇಲ್ವಿಚಾರಕರು - 6

ವಸತಿ ಶಾಲಾ ಶಿಕ್ಷಕರು - 10

ಆ) ಖಾಲಿಇರುವ ನಿಲಯ ಮೇಲ್ವಿಚಾರಕರ ಹಾಗೂ ಶಿಕ್ಷಕರ ಹುದ್ದೆಗಳಲ್ಲಿ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡಲಾಗಿದೆ. ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ; ಹಾಗೂ ಖಾಲಿ ಇರುವ ಆಶ್ರಮ ಶಾಲೆ ಶಿಕ್ಷಕರ ಹುದ್ದೆ ಭರ್ತಿ ಮಾಡುವಂತೆ ಶಿಕ್ಷಣ ಇಲಾಖೆಯನ್ನು ಕೋರಲಾಗಿದೆ.

ಚಿಂಚೋಳಿ ತಾಲ್ಲೂಕಿನಲ್ಲಿ ಗಂಗಾಕಲ್ಯಾಣ ಯೋಜನೆಯಡಿ ಕೊರೆದಿರುವ ಕೊಳವೆ ಬಾವಿಗಳ ವಿವರ

1313(1609) ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಇಲ್ಲಿಯವರೆಗೆ ವೈಯುಕ್ತಿಕ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದಿರುವ ಕೊಳವೆ ಬಾವಿಗಳು ಎಷ್ಟು; ಇನ್ನು ಕೊರೆಯಬೇಕಾದ ಕೊಳವೆ ಬಾವಿಗಳೆಷ್ಟು; ಇವುಗಳಿಗೆ ಪಂಪ್‌ಸೆಟ್ ಅಳವಡಿಸಲಾಗಿದೆಯೇ?

ಆ) ಯಾವ ಯಾವ ಯೋಜನೆಯಡಿಯಲ್ಲಿ ಚಿಂಚೋಳಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನರಿಗೆ ಸಾಲ ವಿತರಣೆ ಮಾಡಿದ ವಿವರ ನೀಡುವುದು?

ಇ) ಭೂ ಒಡೆತನ ಯೋಜನೆಯಡಿಯಲ್ಲಿ ಖರೀದಿಸದ ಜಮೀನು ಎಷ್ಟು?

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಮತ್ತು ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ರಾಜ್ಯಾದ್ಯಂತ ಈ ಕೆಳಕಂಡಂತೆ ಕೊಳವೆ ಬಾವಿಗಳನ್ನು ಕೊರೆದು ಪಂಪುಸೆಟ್ಟು ಅಳವಡಿಸಿ ವಿದ್ಯುದ್ದೀಕರಿಸಲಾಗಿದೆ.